

ಮರದಲ್ಲಿ ಮಲಬಾರ್ ಗ್ಲೈಡಿಂಗ್ ಕಪ್ಪೆಗಳ ಠಿಕಾಣಿ

# ಮಂಡೂಕಗಳ ಮಹಾಮೇಳ!



ದೇಶದಲ್ಲಿ ಕಾಣಸಿಗುವ ಅತ್ಯಂತ ಸಣ್ಣಕಪ್ಪೆ 'ಆರ್ನಮೆಂಟೆಡ್ ಪಿಗ್ಮಿ ಫ್ರಾಗ್'

**ಕಪ್ಪೆಗಳ ಲೋಕದಲ್ಲಿ ಎಂದಾದರೂ ಇಣುಕಿ ನೋಡಿರುವಿರಾ? ಕಪ್ಪೆಗಳ ಶೃಂಗಸಭೆಗೆ ಮಳೆಗಾಲ ಪ್ರಶಸ್ತ ಸಮಯ. ಇದು, ನಿಮ್ಮ ಸುತ್ತಲಿನ ಕಪ್ಪೆಗಳನ್ನು ಗಮನಿಸಲೂ ಸಕಾಲ.**

**■ ಗೋಣಿಕೊಪ್ಪಲು ಡಿ. ಕೃಷ್ಣಚೈತನ್ಯ**



ಗೋಲಿಗಿಂತ ತುಸು ದೊಡ್ಡದಾದ 'ಅಪರಾಡನ್ ಟ್ಯಾಪ್ರೊಬ್ಯಾನಿಕಸ್'

ಮಳೆಯ ಮಹಿಮೆಯೇ ಹಾಗೆ! ಎಲ್ಲೆಲ್ಲೂ ಜೀವಸಂಚಾರದ ನವೋಲ್ಲಾಸ. ನೆಲದಲ್ಲಿ ಬಿದ್ದಿರುವ ಬೀಜಗಳಿಗೆ ಮೊಳೆಯುವಾಸೆ. ಒಣಗಿ ನಿಂತ ಗಿಡಗಳ ಬೇರಿಗೆ ಕೊನರುವಾಸೆ. ಎಲೆ ಉದುರಿಸಿ ನಿಂತ ಮರಗಳಿಗೆ ಚಿಗುರುವಾಸೆ. ಮೊದಲ ಜೋರು ಮಳೆ ಬಂದರೆ ಭೂಮಿಗೆ ಜೀವ ಬಂದಂತೆ ಬರಡಾಗಿದ್ದ ಭೂಮಿ ಹಸುರ ರಗ್ಗನ್ನು ಹೊದ್ದುಕೊಳ್ಳಲು ಆರಂಭಿಸುತ್ತದೆ.

ಇದರೊಂದಿಗೆ ಗುಂಡಿಗಳಲ್ಲಿ ನಿಂತ ನೀರು, ಕಲ್ಲಿನ ಅಡಿಯಲ್ಲಿ ಮತ್ತು ಸಂದು, ಪೊಟರೆ, ಒಣಗಿದ ಎಲೆಗಳ ಅಡಿಯಲ್ಲಿ ಮಲಗಿದ್ದ ಮಂಡೂಕಗಳನ್ನು ಕಾಂತದ ಸೂಜಿಯಂತೆ ಆಕರ್ಷಿಸುತ್ತದೆ.

ಮಳೆ ಬೀಳುವಾಗಲೇ ಸಿಗುವ ಮಣ್ಣಿನ ವಾಸನೆಯರಿತ ಕಪ್ಪೆಗಳು, ಅದ್ಯಾವಾಗಲೋ ಬಂದು ಮೊಟ್ಟೆ ಇಟ್ಟು ಬೆಳಗಿನ ವೇಳೆಗೆ ಕಣ್ಮರೆಯಾಗಿಬಿಡುತ್ತಿದ್ದವು. ಸಾಮಾನ್ಯವಾಗಿ ಮೊದಲ ಮಳೆಗಳು ರಾತ್ರಿಯ ವೇಳೆ ಬೀಳುವುದರಿಂದ ಕುಪ್ಪಳಿಸಿ ಬರುವ ಕಪ್ಪೆಗಳನ್ನು ನೋಡಲು ಸಿಗುವುದೇ ಕಷ್ಟ. ಸಣ್ಣವರಿದ್ದಾಗ ಬೀಳುತ್ತಿದ್ದ ರಭಸದ ಮಳೆ, ಜೊತೆಗೆ ಮಿಂಚು ಮತ್ತು ಆರ್ಭಟಿಸುತ್ತಿದ್ದ ಗುಡುಗು–ಸಿಡಿಲಿಗೆ ನಾವೆಲ್ಲ ಹೆಂಚಿನ ಮನೆಯ ಯಾವುದಾದರೊಂದು ಮೂಲೆಗೆ ಸೇರಿಬಿಡುತ್ತಿದ್ದೆವು. ಹಿರಿಯರು, 'ಲೇ ಮಗಾ, ಯಾವುದಾದರೂ ಕಬ್ಬಿನ ಆಚೆಗೆ ಬಿಸಾಕು, ಏನಾದ್ರು ಸಿಡ್ಲು ಮನೆಗೆ ಬಡ್ದದು' ಎಂದು ಹೇಳಿ ಕುಡುಗೋಲನ್ನೊ, ಮಚ್ಚನ್ನೊ ಹೊರಕ್ಕೆ ಎಸೆಯುತ್ತಿದ್ದರು. ಮಳೆ ನಿಂತ ತಕ್ಷಣ ರಾತ್ರಿಯೆಲ್ಲಾ ಕಪ್ಪೆಗಳ ಕರಕರ, ಗೊಟರ್ ಗೊಟರ್ ಶಬ್ದ. ನಮಗೋ ಬೆಳಿಗ್ಗೆ ಎದ್ದು ಗುಂಡಿಯಲ್ಲಿ ನಿಂತಿರುವ ನೀರನ್ನು ನೋಡುವ ತವಕ.

ನಿಂತ ಕೆಸರಿನ ನೀರಿನಲ್ಲಿ ಮಚ್ಚೆಯಾಕಾರದ ಲೋಳೆ, ಅದರೊಳಗೆ ಸಾಸಿವೆ ಕಾಳಿನಂತಹ ಮೊಟ್ಟೆಗಳು. ಐದಾರು ದಿನಗಳಲ್ಲಿ ಗುಂಡಿಯಲ್ಲಿನ ನೀರು ಕಡಿಮೆಯಾಗಿ ಒಣಗುವಷ್ಟರಲ್ಲಿಯೋ ಅಥವಾ ಮತ್ತೆ ಮಳೆ ಬಂದು ಅದರಲ್ಲಿ ಬೆಳೆಯುವ ಸೊಳ್ಳೆ ಮರಿಗಳನ್ನು ಭಕ್ಷಿಸಿ ಗೊದಮೊಟ್ಟೆಗಳು ಬೆಳೆದು ದೊಡ್ಡದಾಗಿ ಬಿಡುತ್ತಿದ್ದವು ಅನ್ನಿಸುತ್ತೆ. ಇವೆಲ್ಲವನ್ನು ಗಮನಿಸಿದ ನಮ್ಮಲ್ಲಿ ಘಟ್ಟದಲ್ಲಿ ವೃತ್ತಿಗೆ